818(80) ಶ್ರೀ ರವಿ. ಸಿ. ಟಿ. (ಚಿಕ್ಕಮಗಳೂರು): ಪ್ರವಾಸೋದ್ಯಮ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಪ್ರವಾಸಿ ಕೇಂದ್ರಗಳು ಎಷ್ಟು; ಹಾಗೂ ಅವು ಯಾವುವು;

ಆ) ಇವುಗಳ ಅಭಿವೃದ್ಧಿಗೆ ಯಾವ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ;

ಇ) ಐತಿಹಾಸಿಕ ಕೆಮ್ಮಣ್ಣುಗುಂಡಿ ಹಾಗೂ ಕಲ್ಲತ್ತಿಗಿರಿ ಕಿರುಜಲಪಾತ ಇವುಗಳ ಅಭಿವೃದ್ಧಿಗೆ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ (ವಿವರ ನೀಡುವುದು) ;

ಈ) ಇದಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಪಡೆದಿರುವ ಅನುದಾನವೆಷ್ಟು;

ಉ) ಈ ಪ್ರವಾಸಿ ತಾಣಗಳಿಗೆ ಪ್ರತಿ ದಿನ ಬರುವ ಯಾತ್ರಾರ್ಥಿಗಳ ಸಂಖ್ಯೆ ಎಷ್ಟು;

ಊ) ಪ್ರವಾಸಿಗರಿಗೆ ಅನುಕೂಲಕರವಾಗುವ ದೃಷ್ಟಿಯಿಂದ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ (ವಿವರ ನೀಡುವುದು);

ಋ) ಕೆಮ್ಮಣ್ಣುಗುಂಡಿಯ ಯಾತ್ರಿ ನಿವಾಸದ ದುಸ್ಥಿತಿಯ ಬಗ್ಗೆ ಸರ್ಕಾರ ಗಮನಹರಿಸಿದೆಯೇ;

ೠ) ಹಾಗಿದ್ದಲ್ಲಿ, ಇಲ್ಲಿಯ ಅವ್ಯವಸ್ಥೆ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು (ವಿವರ ನೀಡುವುದು)?

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 23 (ಇಪ್ಪತ್ತಮೂರು) ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದ್ದು ಅವುಗಳ ಹೆಸರುಗಳು ಈ ಕೆಳಗಿನಂತಿದೆ.

1) ಚಿಕ್ಕಮಗಳೂರು, 2) ಮುಳ್ಳಯ್ಯನ ಗಿರಿ, 3) ಹಿರೆ ಕೊಡಗಿ, 4) ಬಾಬಾ ಬುಡನಗಿರಿ, 5) ಹಿರೇ ಮಗಳೂರು, 6) ಮುತ್ತೋಡಿ ಅಭಯಾರಣ್ಯ, 7) ಬೆಳವಾಡಿ, 8) ತರೀಕೆರೆ, 9) ಕೆಮ್ಮಣ್ಣುಗುಂಡಿ 10) ಅಮೃತಪುರ, 11) ಭದ್ರಾ ಯೋಜನೆ, 12) ಕಳಸ, 13) ಕುದುರೆಮುಖ, 14) ಅಂಗಡಿ, 15) ಬುಳ್ಳ ರಾಯನದುರ್ಗ, 16) ಶೃಂಗೇರಿ, 17) ಕೊಪ್ಪ, 18) ಕಿಗ್ಗಾ, 19) ಅಯ್ಯನಕೆರೆ, 20) ಆನೆಗುಂದಿ, 21) ಮಾಣಿಕ್ಯಗಿರಿ ಜಲಪಾತ, 22) ಕಲ್ಲತ್ತಗಿರಿ ಜಲಪಾತ, 23) ರತ್ನಗಿರಿ ಬೋರೆ.

ಆ) ಚಿಕ್ಕಮಗಳೂರು ಅಭಯಾರಣ್ಯ ಭದ್ರಾ ಈ ಯೋಜನೆಗೆ ಕೇಂದ್ರ ಸರ್ಕಾರವು ಒಟ್ಟು 202.48 ಲಕ್ಷ ರೂ.ಗಳಿಗೆ ಅನುಮೋದನೆ ನೀಡಿ 161.98 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿರುತ್ತಾರೆ. ಚಿಕ್ಕಮಗಳೂರು ಜಿಲ್ಲೆಯ ಆನೆಗುಂದಿ ಮಾಣಿಕ್ಯಧಾರ ಜಲಪಾತ, ಕಲ್ಲತ್ತಗಿರಿ ಜಲಪಾತ, ಅಮೃತಪುರ, ರತ್ನಗಿರಿ ಬೆಟ್ಟ ಇವುಗಳ ಅಭಿವೃದ್ಧಿಗೆ ಒಟ್ಟು 100.00 ಲಕ್ಷ ರೂ.ಗಳಿಗೆ ಮಂಜೂರಾತಿ ನೀಡಿ ಈಗಾಗಲೇ 60.00 ಲಕ್ಷ ರೂ.ಗಳನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

ಇ) ಕಲ್ಲತ್ತಗಿರಿ ಜಲಪಾತದ ಅಭಿವೃದ್ಧಿಗಾಗಿ ರೂ. 11.65 ಲಕ್ಷಗಳನ್ನು ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಯೋಜಿಸಲಾಗಿದೆ.

ಯೋಜನೆಗಳ ವಿವರ	ಮೊತ್ತ (ಲಕ್ಷ ರೂ.ಗಳಲ್ಲಿ)
ಸ್ನಾನಗೃಹಗಳ ನಿರ್ಮಾಣ, ರಸ್ತೆ ಅಭಿವೃದ್ಧಿ ಮತ್ತು ಕಾಂಪೌಂಡ್ ನಿರ್ಮಾಣ	1.90
ಬಟ್ಟೆ ಬದಲಾಯಿಸುವ ಕೊಠಡಿಗಳು ಮತ್ತು ಶೌಚಗೃಹ	3.50
ಬ್ಯಾರಿಕೇಡ್ ನಿರ್ಮಾಣ	1.50
ಲ್ಯಾಂಡ್ ಸ್ಕೇಪಿಂಗ್, ಆಸನ ಮತ್ತು ಪ್ಯಾರಗೋಲ ನಿರ್ಮಾಣ	4.75
ಒಟ್ಟು	11.65

ಈ) ಚಿಕ್ಕಮಗಳೂರು ಜಿಲ್ಲೆಯ ಐದು ಪ್ರವಾಸಿ ತಾಣಗಳಾದ ಆನೆಗುಂದಿ, ಮಾಣಿಕ್ಯಧಾರ ಜಲಪಾತ, ಕಲ್ಲತ್ತಗಿರಿ ಜಲಪಾತ, ಅಮೃತಪುರ ಹಾಗೂ ರತ್ನಗಿರಿ ಬೆಟ್ಟದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು 100.00 ಲಕ್ಷ ರೂ.ಗಳ ಯೋಜನೆ ರೂಪಿಸಿ ಈಗಾಗಲೇ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ 60.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಪೂರ್ಣ ಯೋಜನಾ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಈಗಾಗಲೇ ರೂ. 60.00 ಲಕ್ಷಗಳನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

ಯೋಜನೆಯ ವಿವರ	ಯೋಜನೆಯ ಅಂದಾಜು ವೆಚ್ಚ	ಕೇಂದ್ರದ ಪಾಲು	ರಾಜ್ಯದ ಪಾಲು	ಬಿಡುಗಡೆಯಾದ ಹಣ ಕೇಂದ್ರದ ಪಾಲು	ಬಿಡುಗಡೆಯಾದ ಹಣ ರಾಜ್ಯದ ಪಾಲು
1. ಭದ್ರಾ ಅಭಯಾರಣ್ಯದಲ್ಲಿ 59.88 ಲಕ್ಷ ರೂಗಳ ಅಂದಾಜು ವೆಚ್ಚದಲ್ಲಿ ಪರಿಸರ ಪ್ರವಾಸೋದ್ಯಮ ಸೌಲಭ್ಯವನ್ನು ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ ವತಿಯಿಂದ ಕೈಗೊಳ್ಳಲಾಗಿದೆ. ಯೋಜನಾ ವೆಚ್ಚ ವಿವರ ಕೆಳಕಂಡಂತಿದೆ.	59.88	45.45	14.43	36.32	23.56
2. ಚಿಕ್ಕಮಗಳೂರು ಬಳಿ ಭದ್ರಾ ಅಭಯಾರಣ್ಯವನ್ನು ರೂ. 202.48 ಲಕ್ಷ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವುದು.	202.48	202.48	–	161.98	–

3. ಬಾಬಾಬುಡನ್ ಗಿರಿ ಬೆಟ್ಟದಲ್ಲಿ ಶೌಚಾಲಯ ನಿರ್ಮಾಣ	15.17	13.20	1.97	13.20	1.97
4. ಚಿಕ್ಕಮಗಳೂರಿನಲ್ಲಿ ರಸ್ತೆಬದಿ ಸೌಲಭ್ಯ ನಿರ್ಮಾಣ	68.08	24.49	43.59	24.49	43.59
5. ಹೊರನಾಡು -- ಕಳಸ ಬಳಿ ಶೌಚಾಲಯ ನಿರ್ಮಾಣ	8.86	8.00	0.86	8.00	0.86
6. ಶೃಂಗೇರಿಯಲ್ಲಿ ಯಾತ್ರಿ ನಿವಾಸ ನಿರ್ಮಾಣ	40.52	40.52	–	40.52	–
7. ಶೃಂಗೇರಿಯಲ್ಲಿ ಶೌಚಾಲಯ ನಿರ್ಮಾಣ	5.00	2.60	2.40	2.60	2.40

ಊ) ಈ ಪ್ರವಾಸಿ ತಾಣಗಳಿಗೆ ಪ್ರತಿದಿನ ಸುಮಾರು 5000 ದೇಶೀಯ ಪ್ರವಾಸಿಗರು ಹಾಗೂ ಸುಮಾರು 35–40 ಜನ ವಿದೇಶೀ ಪ್ರವಾಸಿಗರು ಭೇಟಿ ನೀಡುತ್ತಾರೆ.

ಊ) 1. ಬಾಬಾ ಬುಡನ್ ಗಿರಿ ಬೆಟ್ಟದಲ್ಲಿ ಶೌಚಾಲಯ ನಿರ್ಮಿಸಲಾಗಿದೆ.

2. ಚಿಕ್ಕಮಗಳೂರಿನಲ್ಲಿ ರಸ್ತೆಬದಿ ಸೌಲಭ್ಯ ನಿರ್ಮಿಸಲಾಗಿದೆ.

3. ಹೊರನಾಡು–ಕಳಸ ಬಳಿ ಶೌಚಾಲಯ ನಿರ್ಮಿಸಲಾಗಿದೆ.

4. ಶೃಂಗೇರಿಯಲ್ಲಿ ಯಾತ್ರಿ ನಿವಾಸ ನಿರ್ಮಿಸಲಾಗಿದೆ.

5. ಶೃಂಗೇರಿಯಲ್ಲಿ ಶೌಚಾಲಯ ನಿರ್ಮಿಸಲಾಗಿದೆ.

ಋ) ಪ್ರವಾಸೋದ್ಯಮ ಇಲಾಖೆಗೆ ದೂರು ಬಂದಿಲ್ಲ. ದೂರು ಬಂದ ಪಕ್ಷದಲ್ಲಿ ತೋಟಗಾರಿಕೆ ಇಲಾಖೆಗೆ ತಿಳಿಸಲಾಗುವುದು.

ಎ) ಪ್ರವಾಸೋದ್ಯಮ ಇಲಾಖೆಗೆ ದೂರು ಬಂದಿಲ್ಲ. ದೂರು ಬಂದ ಪಕ್ಷದಲ್ಲಿ ತೋಟಗಾರಿಕೆ ಇಲಾಖೆಗೆ ತಿಳಿಸಲಾಗುವುದು.

819(83) ಶ್ರೀ ರವಿ. ಸಿ.ಟಿ : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಭದ್ರಾ ಅಭಯಾರಣ್ಯ ಹಾಗೂ ರಾಜ್ಯದ ಇತರ ಅರಣ್ಯಗಳಲ್ಲಿ ಬೆಂಕಿ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬೆಂಕಿ ಅನಾಹುತಕ್ಕೆ ಕಾರಣಗಳೇನು;

ಇ) ಇದರಿಂದ ಉಂಟಾದ ನಷ್ಟದ ಪ್ರಮಾಣ ಎಷ್ಟು (ಸರ್ಕಾರಿ ಹಾಗೂ ಖಾಸಗಿ ಆಸ್ತಿ–ಪಾಸ್ತಿಗಳ ನಷ್ಟದ ವಿವರ ನೀಡುವುದು);

ಈ) ಇಂತಹ ಖಾಸಗಿಯವರ ಆಸ್ತಿ–ಪಾಸ್ತಿಗಳಿಗೆ ನಷ್ಟವಾಗಿರುವ ಪ್ರಕರಣಗಳಲ್ಲಿ ಅರ್ಹ ಫಲಾನುಭವಿಗಳಿಗೆ ಸೂಕ್ತ ಪರಿಹಾರವನ್ನು ಸರ್ಕಾರ ನೀಡಿದೆಯೇ;

ಉ) ಇದಕ್ಕಾಗಿ ಸರ್ಕಾರ ಎಷ್ಟು ಮೊತ್ತವನ್ನು ಪರಿಹಾರವಾಗಿ ಬಿಡುಗಡೆ ಮಾಡಿದೆ;